ಬುದ್ಧಿಮತ್ತೆಯ ಕೆಲಸಗಳಿಂದಾಗಬಹುದಾದ ಅಪಾಯ, ಅನನುಕೂಲಗಳನ್ನು ಎದುರಿಸಲು ಬೇಕಾದ ಸುರಕ್ಷಾ ವಿಧಾನ ಮತ್ತು ಸಲಕರಣೆಗಳನ್ನು ನಿರ್ಮಿಸುವ ಕೆಲಸ ಮಾಡೋಣ' ಎಂದಿದ್ದಾರೆ. ಸಹಿ ಹಾಕಿದ ಪ್ರಮುಖರಲ್ಲಿ ಟೆಸ್ಲಾ ಕಂಪನಿಯ ಇಲಾನ್ ಮಸ್ಕ್, ಕ್ಯಾಲಿಫೋರ್ನಿಯಾ ಬರ್ಕ್‌ಲೀ ವಿವಿಯ ಕಂಪ್ಯೂಟರ್ ತಜ್ಞ ಸ್ಟುವರ್ಟ್ ರಸೆಲ್ ಮತ್ತು ಆಪಲ್ ಕಂಪನಿಯ ಸಹ ಸಂಸ್ಥಾಪಕ ಸ್ಟೀವ್ ವೋಜ್ನಿಯಾಕ್ ಇದ್ದಾರೆ.

ಯಾಂತ್ರಿಕ ಬುದ್ಧಿಮತ್ತೆ ಬಗ್ಗೆ ಕಳೆದ ದಶಕದ ಆರಂಭದಿಂದಲೂ ಮಾತು ಕೇಳಿ ಬರುತ್ತಿತ್ತು. ಆದರೆ ಅದರ ನೇರ ಅನುಭವ ಅನೇಕರಿಗೆ ಆಗಿರಲಿಲ್ಲ. ಯಾವಾಗ ಚಾಟ್ ಜಿಪಿಟಿ ಮಾರುಕಟ್ಟೆಗೆ ಬಂದು ತನ್ನ ಕರಾಮತ್ತು ತೋರಿಸಲು ಶುರುಮಾಡಿತೋ ಆಗಲೇ ಯಾಂತ್ರಿಕ ಬುದ್ಧಿಮತ್ತೆಯ ನೈಜ ಶಕ್ತಿಯ ಅರಿವಾಯಿತು. ಅದು ಹೇಗೆ ಅರಿವಾಯಿತು ಎಂದುಕೊಂಡಿರಿ? ಅದಕ್ಕೆ ಸ್ಪಷ್ಟ ನಿದರ್ಶನ ಸಿಕ್ಕಿದ್ದು ಅದರ ಬಳಕೆದಾರರ ಸಂಖ್ಯೆಯು ರಾತೋರಾತ್ರಿ ಲಕ್ಷ ಲಕ್ಷ ತಲುಪಿದ್ದರಿಂದ. ಮಾರುಕಟ್ಟೆಗೆ ಕಾಲಿಟ್ಟ ಐದೇ ದಿನಗಳಲ್ಲಿ ಹತ್ತು ಲಕ್ಷ ಜನ ಅದನ್ನು ಬಳಸಿ ತಮಗಾದ ಅನುಭವದಿಂದ ಥ್ರಿಲ್ ಆಗಿದ್ದರು. ಎರಡೇ ತಿಂಗಳಲ್ಲಿ ಅದರ ಸಂಖ್ಯೆ ಹತ್ತು ಕೋಟಿ ದಾಟಿತ್ತು. ಟಿಕ್‌ಟಾಕ್ ಮಾರುಕಟ್ಟೆಗೆ ಬಂದಾಗ ಹತ್ತು ಕೋಟಿ ಬಳಕೆದಾರರನ್ನು ಸಂಪಾದಿಸಲು ಅದಕ್ಕೆ 9 ತಿಂಗಳ ಸಮಯ ಹಿಡಿದರೆ, ಇನ್‌ಸ್ಟಾಗ್ರಾಂಗೆ ಎರಡು ವರ್ಷ ಬೇಕಾಗಿತ್ತು.

## ಎಲ್ಲೆಲ್ಲೂ ಯಾಂತ್ರಿಕ ಬುದ್ಧಿಮತ್ತೆ

ಸಾಮಾನ್ಯರಷ್ಟೇ ಅಲ್ಲ, ವಿಶ್ವದ ಬೃಹತ್ ಉದ್ಯಮಗಳ ಮುಖ್ಯಸ್ಥರಿಗೂ ಯಾಂತ್ರಿಕ ಬುದ್ಧಿಮತ್ತೆಯದ್ದೇ ಗುಂಗು. ಹಿಂದೆಲ್ಲಾ ಇತರರನ್ನು ಸಂಪರ್ಕಿಸಿ, ಸಂವಾದ ನಡೆಸಿ, ಒಪ್ಪಂದಕ್ಕೆ ಸಹಿ ಹಾಕಿ ಮುಂದುವರೆಯಬೇಕಿತ್ತು. ಇಂಟರ್‌ನೆಟ್ ಮತ್ತು ಯಾಂತ್ರಿಕ ಬುದ್ಧಿಮತ್ತೆಗಳ ಸರಿಯಾದ ಸಂಯೋಗದಿಂದ ಕಂಪನಿಯ ವ್ಯವಹಾರಗಳ ಅಂಕಿಅಂಶಗಳನ್ನು ಚಾಟ್ ಜಿಪಿಟಿಗೆ ಫೀಡ್ ಮಾಡಿ, ಅದು ನೀಡಿದ ಸಂಭಾವ್ಯ ಉತ್ತರಗಳಿಂದ ಆಶ್ಚರ್ಯಚಕಿತರಾಗಿದ್ದಾರೆ. ಕಂಪನಿ ನೀಡಿದ ಡೇಟಾ ಪರಿಶೀಲಿಸಿ ನೀವು ಇಂತಿಂಥ ಕಂಪನಿಗಳ ಉತ್ಪನ್ನಗಳನ್ನು ಇಂತಿಂಥ ಕಾಲದಲ್ಲಿ, ಇಷ್ಟು ಬೆಲೆಗೆ ಕೊಂಡಲ್ಲಿ ಲಾಭವಾಗುತ್ತದೆ ಎಂತಲೋ, ಇದೇ ಉತ್ಪನ್ನಕ್ಕೆ ಬಂಡವಾಳ ಹೂಡಿದರೆ ಬೇಡ ಎಂದು ಖಡಾಖಂಡಿತವಾಗಿ ಹೇಳಿದ ಚಾಟ್ ಜಿಪಿಟಿ, ಕಂಪನಿಯ ವಿಶ್ವಾಸ ಗಳಿಸುವಲ್ಲಿ ಯಶಸ್ವಿಯಾಗಿದೆ. ಇಂಥದೊಂದು ಪರೀಕ್ಷೆಯನ್ನು 'ಪ್ರೂಫ್ ಆಫ್ ಕಾನ್ಸೆಪ್ಟ್' ಎನ್ನುತ್ತಾರೆ. ಅಂದರೆ ಚಾಟ್ ಜಿಪಿಟಿ ಹೇಳುತ್ತಿರುವುದು ಸರಿಯೇ ಎಂಬುದನ್ನು ಒರೆಗೆ ಹಚ್ಚಲು ಈ ಪರೀಕ್ಷೆ ನಡೆಸಲಾಗುತ್ತಿದೆ. ಅಚ್ಚರಿಯೆಂದರೆ ಚಾಟ್ ಜಿಪಿಟಿ ಈ ಪರೀಕ್ಷೆಗಳನ್ನು ಯಶಸ್ವಿಯಾಗಿ ಪಾಸ್ ಆಗಿದೆ.

ಇನ್ನೊಂದು ಉದಾಹರಣೆ ಗಮನಿಸಿ. ನಿಗದಿಯಾಗಿದ್ದ ಸಭೆಯೊಂದಕ್ಕೆ ನೀವು ಹಾಜರಾಗಲು ಸಾಧ್ಯವಾಗುವುದಿಲ್ಲ



ಎಂದಿಟ್ಟುಕೊಳ್ಳಿ. ಸಭೆ ನಿಗದಿಯಂತೆ ನಡೆಯುತ್ತದೆ. ಯಾವುದೇ ಮಾಧ್ಯಮದ ಮೂಲಕ ನಿಮಗೆ ಅದರ ಸಂಪರ್ಕ ಸಾಧ್ಯವಾಗುವುದೇ ಇಲ್ಲ. ಅಥವಾ ನಿಮ್ಮ ಆರೋಗ್ಯ ಸರಿ ಇರದ ಕಾರಣ ನಿಮಗೆ ಸಭೆಗೆ ಬರಲಾಗುವುದಿಲ್ಲ. ತಂದೆ–ತಾಯಿಯ ವಾರ್ಷಿಕ ತಿಥಿ–ಮದುವೆ ಸಮಾರಂಭ ಹೀಗೆ ಏನೇನೋ ಕಾರಣಗಳಿಂದ ನಿಮಗೆ ಬರಲಾಗುವುದಿಲ್ಲ ಎಂದಾದರೂ ನಿಮಗೆ ಅನುಕೂಲವಾದ ದಿನ ಸಮಯ ಚಾಟ್ ಜಿಪಿಟಿಯನ್ನು ಅಂದಿನ ಸಭೆಯಲ್ಲಿ ಏನು ನಡೆಯಿತು? ಯಾವ ನಿರ್ಣಯ ಆಯಿತು? ಯಾರ್‍ಯಾರು ಇದ್ದರು? ಎಂದು ಕೇಳಿದರಾಯಿತು. ಕೇಳಿದ ಪ್ರಶ್ನೆಗಳಿಗೆ ತಕ್ಕದಾದ ಪ್ರತಿಯೊಂದು ಉತ್ತರವನ್ನೂ ನಿಮಗೆ ತಿಳಿಸಿಬಿಡುತ್ತದೆ. ಆಫೀಸ್‌ಗೆ ಬರುವ ಮುನ್ನವೇ ಚಾಟ್ ಜಿಪಿಟಿಯೊಂದಿಗೆ ಸಂವಾದ ನಡೆಸಿದರೆ ಸಾಕು. ಅಂದಿನ ಕೆಲಸ ಸರಾಗವಾದಂತೆಯೆ. ಇಂಥದೊಂದು ಸವಲತ್ತು ನಮಗೆ ಬೇಕಿತ್ತಲ್ಲವೆ? ಎಂದು ಕೇಳುವ ಮೈಕ್ರೊಸಾಫ್ಟ್ ಇಂಡಿಯಾದ ಟೆಕ್ನಾಲಜಿ ಆಫೀಸರ್ ರೋಹಿಣಿ ಶ್ರೀವಾಸ್ತವ್, ಹಣಕ್ಕಿಂತ ಸಮಯ ಮೌಲ್ಯಯುಕ್ತವಾದದ್ದು (Time is more than Money) ಎನ್ನುವ ಈ ಕಾಲದ ಅವಶ್ಯಕತೆಗಳಲ್ಲಿ ಇದು ಅತ್ಯಂತ ಅನಿವಾರ್ಯವಾದುದು ಎನ್ನುತ್ತಾರೆ.

## ಆರ್ಥಿಕ ಎರಿಳಿತಕ್ಕೆ ಹೊಡೆತ

'ಕಂಪನಿಗಳು ಎಐ ಬಳಸಿಕೊಂಡು ಬಿಡುಗಡೆಗೊಳಿಸುತ್ತಿರುವ ಉತ್ಪನ್ನಗಳ ಸಂಖ್ಯೆ ಗಾಬರಿ ಹುಟ್ಟಿಸುವ ಪ್ರಮಾಣದಲ್ಲಿ ಹೆಚ್ಚಾಗಿರುವುದನ್ನು ಗಮನಿಸಿದರೆ, ಜಗತ್ತಿನ

